<u>**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರು ಕನಕಪುರ ಇವರ ನ್ಯಾಯಾಲಯದಲ್ಲಿ**</u>

**ಸಿಸಿ ಸಂಖ್ಯೆ : 44/2019**

**ಫಿರ್ಯಾದುದಾರರು :** ರಾಜ್ಯದ ಪರ ಕೋಡಿಹಳ್ಳಿ ಪೊಲೀಸ್ ಠಾಣೆ

– ವಿರುದ್ದ –

**ಆರೋಪಿತರು :** ಮುತ್ತುರಾಜು ಬಿನ್ ಕೃಷ್ಣ

20 ವರ್ಷ,

ಕೊಕ್ಕರೆಹೊಸಹಳ್ಳಿ ಗ್ರಾಮ

ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು

## <u>ದೋಷಾರೋಪಣೆ</u>

**ಶ್ರೀಮತಿ. ಲತಾಶ್ರೀ ಬಿ.ವಿ., ಬಿ.ಎ.ಎಲ್.,ಎಲ್.ಬಿ ಒಂದನೇ ಅಪರ ನ್ಯಾಯಿಕ ದಂಡಾಧಿಕಾರಿಗಳು, ಕನಕಪುರ, ಆದ ನಾನು ನಿಮ್ಮ ಮೇಲೆ ದೋಷಾರೋಪಣೆ ಏನೆಂದರೆಃ-**

ದಿನಾಂಕ: 22/07/2016 ರಂದು ಬೆಳಿಗ್ಗೆ 08-30 ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು ಉಯ್ಯಂಬಳ್ಳಿ ಹೋಬಳಿ, ಕೊಕ್ಕರೆಹೊಸಹಳ್ಳಿ (ಹಾಲಿ ಬೆಂಗಳೂರು ವಾಸಿ] ಗ್ರಾಮದ ನಜೀರ್ ಅಹಮದ್ ರವರ ಬಾಬು ಜಮೀನಿನ ಕಡೆಗೆ ಚಾಸಾ-01 ರುದ್ರಮ್ಮ ರವರು ಮಲ ವಿಸರ್ಜನೆ ಮಾಡಲು ಹೋಗುತ್ತಿದ್ದಾಗ ಆರೋಪಿಯಾದ ನೀವು ಚಾಸಾ-1 ರವರನ್ನು ಮಾನಭಂಗ ಮಾಡುವ ಉದ್ದೇಶದಿಂದ ಹಿಂದಿನಿಂದ ಹೋಗಿ ಚಾಸಾ-01 ರವರನ್ನು ತಬ್ಬಿ ಹಿಡಿದುಕೊಂಡು, ಎದೆಯನ್ನು ಹಿಸುಕಿ ಮಾನಭಂಗ ಮಾಡಲು ಪ್ರಯತ್ನಿಸಿದ್ದಲ್ಲದೇ ಕೈಗಳಿಂದ ಚಾಸಾ-1 ರವರ ಕೆನ್ನೆಗೆ ಹೊಡೆದು ನೋವುಂಟು ಮಾಡಿದ್ದು, ಸದರಿ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 354, 354(ಡಿ), 354(ಬಿ) ಮತ್ತು 323 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ.

ಸದರಿ ಅಪರಾಧಗಳು ಈ ನ್ಯಾ ಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರೀ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯನ್ನು ಈ ದಿನ ದಿನಾಂಕಃ 18.05.2026 ರಂದು ಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆವರ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿದೆ)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ, ಕನಕಪುರ**

## <u>ಆರೋಪಿಯ ಹೇಳಿಕೆ</u>

ಪ್ರಶ್ನೆ-1 ಇದೀಗ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬಯಸುವಿರಾ?

ಉತ್ತರಃ-

(ದಿನಾಂಕಃ 18.05.2026 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಡೀಕರಿಸಿದೆ.)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ, ಕನಕಪುರ**

ಆರೋಪಿಯ ಸಹಿ :